ಮುಧೋಳ ತಾಲ್ಲೂಕಿನ ಮುದ್ದಾಪುರ ಹತ್ತಿರ ಯಾತ ನೀರಾವರಿ ಯೋಜನೆ

೨೩೬. ಶ್ರೀ ಬಿ ಜಿ. ಜವಳಿಂಡಿ (ಮುಧೋಳ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿ ಟ್ಟು ಉತ್ತರಿಸುವರೇ ?

(ಅ) ಮುಧೋಳ ತಾಲ್ಲೂಕಿನ ಮುದ್ದಾಪುರ ಗ್ರಾಮದ ಹತ್ತಿರ ಘಟಪ್ರಭಾ ನದಿಯಿಂದ ಯಾತ ನೀರಾವರಿ ಯೋಜನೆ ಯಾವಾಗ ಕೈಗೊಳ್ಳಲಾಯಿತು ?

(ಆ) ಸದರಿ ಯೋಜನೆಗೆ ತಗಲಿದ ವೆಚ್ಚವೆಷ್ಟು. ಮತ್ತು ಮೇಲಿನ ಯೋಜನೆ ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅಂತಹ ಯಾವ ಯಾತ ನೀರಾವರಿ ಯೋಜನೆಯನ್ನು ಕೈಗೊಂಡಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಆನೆ ತುಳಿತದಿಂದ ಸತ್ತವರು

೧೫೭. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ೧೯೮೫ರ ಜನವರಿ ತಿಂಗಳಿಂದ ಈವರೆಗೆ ಈಚೆಗೆ ಆನೆ ತುಳಿತದಿಂದ ಸತ್ತವರ ಸಂಖ್ಯೆ ಎಷ್ಟು ?

(ಆ) ಸತ್ತವರ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೆ ಹಾಗೂ ನೀಡಿರುವ ಪರಿಹಾರವೆಷ್ಟು?

(ಇ) ದಿನಾಂಕ ೧೩-೫-೧೯೮೫ ರಂದು ಸಾವಿಗೀಡಾದ ಈ ತಾಲ್ಲೂಕಿನ ಬಸಪುರದ ಕಾಳಸ್ವಾಮಿ ನಾಯಕನ ಕುಟುಂಬಕ್ಕೆ ಪರಿಹಾರ ಧನ ನೀಡಲಾಗಿದೆಯೇ ?

(ಈ) ಹಾಗಿದ್ದಲ್ಲಿ, ಕೊಡಲಾಗಿರುವ ಪರಿಹಾರ ಧನ ಎಷ್ಟು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

(ಅ) ಇಬ್ಬರು ವ್ಯಕ್ತಿಗಳು

(ಆ) ಇನ್ನೂ ಕೊಟ್ಟಿಲ್ಲ. (೫೦೦೮-೦೦ ರೂ.ಗಳನ್ನು ಪ್ರತಿ ಪ್ರಕರಣದಲ್ಲಿ ಕೊಡಬೇಕಾಗುತ್ತದೆ)

(ಇ) ಇನ್ನೂ ಕೊಟ್ಟಿಲ್ಲ

(ಈ) ವಾರಸುದಾರರ ದಾವಿಲಾತಿಗಳು ಬೇಕಾಗಿರುವುದರಿಂದ ಇನ್ನೂ ಕೊಡಲಾಗಿಲ್ಲ.

ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವೀಧರರಿಗೆ ಸಮಾನ ವೇತನ ಸೌಲಭ್ಯ ಒದಗಿಸುವುದು

೧೪೧೬. ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಪಹಾಪುರ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದ ಸಹಾಯಕ ಅಭಿಯಂತರ ಸಂಘದವರು ವೈದ್ಯಕೀಯ ಪದವೀಧರರಿಗೆ ಸಮಾನವಾದ ವೇತನ ಸೌಲಭ್ಯವನ್ನು ತಪ್ಪಿಗೂ ಕೊಡಬೇಕೆಂದು ಸುಮಾರು ೨೦ ವರ್ಷಗಳಿಂದಲೂ ಒತ್ತಾಯಿಸುತ್ತಿರುವುದು ನಿಜವಲ್ಲವೇ ?

(ಆ) ವೈದ್ಯಕೀಯ ಪದವಿ ಹಾಗೂ ಇಂಜಿನಿಯರಿಂಗ್ ಪದವೀಗಳ ವ್ಯಾಸಂಗದ ಅವಧಿಯು ಒಂದೇ ಇರುವುದು ನಿಜವಲ್ಲವೇ ?

(ಇ) ಹಾಗಿದ್ದಲ್ಲಿ, ಇಬ್ಬರಿಗೂ ಸಮಾನವಾದ ಸಂಬಳ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು. ಈ ವಿಷಯವು ಅಧಿಕಾರಿ ವೇತನ ಮಂಡಲಿಯು ಮಂಜೂರಿದೆ.

(ಆ) ಇಲ್ಲ

(ಇ) ಉದ್ಭವಿಸುವುದಿಲ್ಲ.

ಸಹಾಯಕ ಕಾರ್ಯಕಾರಿ ಅಭಿಯಂತರರನ್ನು ನೇರವಾಗಿ ನೇಮಕಾತಿ ಮಾಡಿಕೊಳ್ಳುವುದು

೧೪೧೫. ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಪಹಾಪುರ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸಹಾಯಕ ಕಾರ್ಯಕಾರಿ ಅಭಿಯಂತರ ದರ್ಜೆಗೆ ನೇರ ನೇಮಕಾತಿ ಮಾಡುವ ವಿಂಜೂಲಕ ಪ್ರೊಬೇಷನರಿ ಅಧಿಕಾರಿಗಳನ್ನು ತಗೆದುಕೊಳ್ಳುವ ಬಗ್ಗೆ ಸರಕಾರದವರು ಆದೇಶ ಹೊರಡಿಸಿರುವುದು ನಿಜವೆ,

(ಆ) ಹಾಗಿದ್ದಲ್ಲಿ ಇದರಿಂದ ಈಗಾಗಲೇ ಹೆಚ್ಚಿನ ಅವಧಿಯ ಸೇವೆ ಸಲ್ಲಿಸಿದವರಿಗೆ ತೊಂದರೆಯಾಗುವುದು ಸರಕಾರದವರ ಗಮನಕ್ಕೆ ಬಂದಿದೆಯೆ,

(ಇ) ಈ ಬಗ್ಗೆ ರಾಜ್ಯದ ಸಹಾಯಕ ಅಭಿಯಂತರ ಸಂಘದವರು ತಮಿಳುನಾಡಿನಲ್ಲಿರುವಂತೆ ಪ್ರೊಬೇಷನರಂಗಳನ್ನು ತೆಗೆದುಕೊಳ್ಳಕೂಡದಾಗಿ ಒತ್ತಾಯಿಸಿರುವುದು ನಿಜವಲ್ಲವೇ,

(ಈ) ಹಾಗಿದ್ದಲ್ಲಿ, ಸರಕಾರದವರು ಕೂಡಲೇ ಮೇಲ್ಕಂಡ ಆದೇಶವನ್ನು ಹಿಂತೆಗೆದುಕೊಳ್ಳುವರೆ, ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಹೌದು

(ಆ) ಇಲ್ಲ

(ಇ) ಹೌದು

(ಈ) ಇಲ್ಲ. ಈ ದರ್ಜೆಗೆ ಪ್ರತಿಭಾವಂತರನ್ನು ಸೇರಿಸಿಕೊಳ್ಳುವ ಇಚ್ಛೆಯಿಂದಲೂ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಲು ನೇರ ನೇಮಕಾತಿ ಅವಶ್ಯಕ.

ಮಂಡ್ಯ ಕೆರೆಯನ್ನು ಒಣಗಿಸಿ ನಿವೇಶನಗಳನ್ನಾಗಿ ಮಾರ್ಪಡಿಸುವುದು

೧೫೫೮. ಶ್ರೀ ಎಸ್. ಡಿ. ಜಯರಾಮ (ಮಂಡ್ಯ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಂಡ್ಯ ನಗರದ ಕೆರೆಯನ್ನು ಒಣಗಿಸಿ ಸೈಟುಗಳಾಗಿ ಮಾರ್ಪಡಿಸಿ ಮಂಡ್ಯ ನಗರದ ಬೆಳವಣಿಗೆಗೆ ಅವಕಾಶ ಮಾಡಿಕೊಡಲಾಗುವುದೇ ?

(ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು ?

(ಇ) ಸರ್ಕಾರ ಇದರ ಬಗ್ಗೆ ತ್ವರಿತವಾಗಿ ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಸಲಹೆ ಪರಿಶೀಲನೆಯಲ್ಲಿದೆ

(ಆ) ೪೮೫ ಲಕ್ಷ ರೂಪಾಯಿಗಳು (೧೯೮೪–೮೫ ಸಾಲಿನ ದರಗಳ ಮಟ್ಟದಲ್ಲಿ)

(ಇ) ತಾಂತ್ರಿಕ ಸಮಿತಿಯ ಅನುಮೋದನೆಯ ನಂತರ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.